Sri B. HUTCHE GOWDA.—How long does it take?

Sri T. CHANNIAH.—We are thinking of amending the Prohibition Act on the lines of the Bombay Act to enable our Courts to award deterrent punishment in illicit distillation cases, etc.

Sri B. HUTCHE GOWDA.—There is no partial prohibition in Bombay.

Sri T. CHANNIAH.—Total prohibition.

Sri B. HUTCHE GOWDA.—So you cannot enforce it here.

Sri T. CHANNIAH.—Punishments that are at present awarded by our courts are somewhat lenient. As I said, we are contemplating certain amendments to the Prohibition Act somewhat on the lines of the Bombay Act, so that deterrent punishment is provided for certain types of prohibition offences. The Courts will also be empowered to award more from the fine imposed as rewards to informants and police officers who are responsible for detection of the cases.

Before extending prohibition to other parts of the State, it is necessary to assess the results so far achieved in the dry districts. The question was under the consideration of Government. But as the Government of India are likely to take up this question, it was considered not desirable for each state to pursue the question individually.

Sri J. MOHAMED IMAM.—I think the Government of India have not yet constituted the Committee.

Sri T. CHANNIAH.—I think so. The Government of India will be addressed in the matter. Government are of the view that the extension of prohibition should be consistent with the national economy. It will not be possible for the State to extend prohibition to other parts of the State; but it is proposed to make certain adjustments in the areas where prohibition is in force to meet certain local problems. Some of my friends said that on account of illicit distillation on a large scale in rural areas, even women and children have become drink addicts. If only the public whole-heartedly co-operate with Government in the detection of those cases, it is possible to minimise this evil. I would therefore appeal to the Movers of the Resolution also to whole-heartedly co-operate with Government in the detection of illicit distillation cases and to bring to their notice.....

Sri J. MOHAMED IMAM.—In what form? You want us to visit house to house?

Sri T. CHANNIAH.—If such things come to their notice, they may duly inform the prohibition police so that they may conduct necessary enquiries and bring the offenders to book.

Sri P. M. SWAMIDURAI.—I press the Resolution.

Mr. SPEAKER.—The question is:

> "This Assembly is of the opinion that Prohibition should be repealed and the amount obtained by removal of Prohibition may be utilised for the betterment of the State."

The motion was negatived.

Mr. SPEAKER.—In a way we have now disposed of nine resolutions by this single resolution, *viz.*, Nos. 15, 25, 35, 37 and 38 as well as Resolutions Nos. 24, 39, 47 and 113.

The next resolution stands in the name of Sri R. Muniswamiah. He is not present. Next Resolution No. 17 by Sri P. R. Ramaiya.

Sri P. R. RAMAIYA (Basavangudi).—Sir, I do not propose to move it.

Mr. SPEAKER.—Resolution No. 18. Sri L. Siddappa is not present. No. 19 by Sri Kemparaj.

No. 19. Fixing a ceiling limit to Lands in possession of Absentee Landlords.

Sri B. T. KEMPA RAJ (Bangalore South—Scheduled Castes).—I beg to move:

> "This Assembly is of the opinion that an absentee landlord may be allowed to possess

(SRI B. T. KEMPARAJ.)

only 25 acres of *Kushki*, 5 acres of *Tari* or *Bagayat*, with a view to make the tiller of the soil the master of it and give security for the tiller."

ಅಧ್ಯಕ್ಷರೇ, ದೇಶದಮುಂದೆ ರೈತರ ಸಮಸ್ಯೆ ಬಹಳ ಕಠಿಣವಾಗಿದೆ. ದಿನೇ ದಿನೇ ಹೆಚ್ಚುತ್ತಿರುವ ಪ್ರಜಾ ಸಂಖ್ಯೆ, ಅವರ ಕಷ್ಟವನ್ನು ಇಮ್ಮಡಿಸಿದೆ. ಸ್ವಾತಂತ್ರ್ಯದ ಸೂರ್ಯನನ್ನು ಕಾಣುತ್ತಾ ತಾವೂ ಸುಖವಾಗಿ ಜೀವಿಸಬೇಕು ಎಂದು ಎಲ್ಲೆಲ್ಲೂ ರೈತರು ತಮಗೆ ಒಡೆತನವಿರಬೇಕೆಂದು ಕೇಳುತ್ತಿರುವುದು ಹೆಚ್ಚಾಗಿದೆ. ಇವೊತ್ತಿನದಿವಸ ಇಡೀ ಹಿಂದೂಸ್ಥಾನದಲ್ಲಿ ವ್ಯವಸಾಯ ವೃತ್ತಿಯನ್ನು ಅವಲಂಬಿಸಿರುವ ರೈತನ ವಿಷಯವನ್ನು ತೆಗೆದುಕೊಳ್ಳೋಣ. ಮನುಷ್ಯನಿಗೆ ಹೃದಯವು ಹೇಗೆ ಕೆಲಸ ಮಾಡತಕ್ಕಂಥ ಅವಯವಗಳಲ್ಲೆಲ್ಲಾ ಹೆಚ್ಚು ಪ್ರಾಮುಖ್ಯವಾದುದೋ ಹಾಗೆಯೆ ವ್ಯವಸಾಯಮಾಡತಕ್ಕ ರೈತನೂ ಸಮಾಜದಲ್ಲಿ ಅಷ್ಟೇ ಪ್ರಾಮುಖ್ಯಸ್ಥಾನವನ್ನು ಪಡೆದಿರುತ್ತಾನೆ. ಕಾಶ್ಮೀರ ದೇಶದ ಉದಾಹರಣೆಯನ್ನು ತೆಗೆದುಕೊಳ್ಳುವುದಾದರೆ, ಅಲ್ಲಿನ ಮುಖ್ಯಮಂತ್ರಿಗಳಾದ ಷೇಕ್ ಅಬ್ದುಲ್ಲಾರವರು ಒಂದು ಕಾನೂನನ್ನೇ ಜಾರಿಗೆ ತಂದು ಚಾಣಾಕ್ಷತೆಯಿಂದ ಯಶಸ್ವಿಯಾಗಿ ಭೂಸುಧಾರಣೆಯನ್ನು ಕಾರ್ಯಗತ ಮಾಡಿದ್ದಾರೆ. ಇದೇ ಭೂಸುಧಾರಣೆಗೆ ಸಂಬಂಧಪಟ್ಟಂತೆ ಬೀಹಾರ್ ಮುಂತಾದ ಪ್ರಾಂತ್ಯಗಳಲ್ಲಿ ಸಾನಾತೆರದಲ್ಲಿ ರೈತರಿಂದ ಪ್ರದರ್ಶನಗಳೂ, ಸತ್ಯಾಗ್ರಹಗಳೂ ನಡೆದಿರುವುದನ್ನು ಕೇಳಿದ್ದೇವೆ. 30,000 ಜನರು ಸರ್ಕಾರದ ಮುಂದೆ ಸತ್ಯಾಗ್ರಹ ಹೂಡುವ ಪುಟ್ಟಕ್ಕೆ ಹೋಗಿದ್ದರೆಂದರೆ ರೈತರ ಸಮಸ್ಯೆ ಇಂದು ಎಷ್ಟು ಉಲ್ಬಣವಾಗಿರಬಹುದೆಂದು ಗೊತ್ತಾಗುತ್ತದೆ. ಇದು ಯಾವ ಪರಿಹಾರಕ್ಕಾಗಿ ಉಂಟಾಗಿದೆಯೆಂಬುದನ್ನು ನಾವು ಯೋಚಿಸಬೇಕಾಗಿದೆ. ರೈತನು ತನಗೆ ಸ್ವತಃ ಮಾಡುವುದಕ್ಕೆ ಜಮೀನು ಬೇಕು, ತಾನು ಜಮೀನನ್ನು ಮಾಡುವಾಗ ಅದರ ಒಡೆತನವೂ ತನಗೇ ಇರಬೇಕೆಂಬುದೇ ಅವನ ಪ್ರಾರ್ಥನೆ.

ಎರಡನೆಯದಾಗಿ, ಯಾರು ರೈತರು ಹೆಚ್ಚಾಗಿಲ್ಲದ ಕಾಲದಲ್ಲಿ, ಜನಸಂಖ್ಯೆಯು ಹೆಚ್ಚಾಗಿಲ್ಲದ ಕಾಲದಲ್ಲಿ, ಈಗಿರತಕ್ಕಂಥ ತೊಡಕಾದ ಪ್ರಶ್ನೆಗಳು ಉದ್ಭವಿಸದೆ ಇದ್ದ ಕಾಲದಲ್ಲಿ ಅಧಿಕವಾದ ಜಮೀನಿನ ಮಾಲೀಕತ್ವವನ್ನು ಪಡೆದುಕೊಂಡಿದ್ದಾರೋ ಅಂಥವರ ಕೈಯಲ್ಲಿ ಕೂಲಿಗೋ, ಗುತ್ತಿಗೆಗೋ, ವಾರಕ್ಕೋ ಜಮೀನನ್ನು ಮಾಡಿಕೊಂಡು ಅನೇಕ ರೈತರು ಒದ್ದಾಡುತ್ತಿದ್ದಾರೆ. ಈ ರೈತರುಗಳನ್ನು ಇಂಥ ಕಷ್ಟಗಳಿಂದ ತಪ್ಪಿಸಿ ಸ್ವತಂತ್ರ ಭಾರತದಲ್ಲಿ ಅವರೂ ಸ್ವತಂತ್ರವಾಗಿ ವ್ಯವಸಾಯದ ಕಸಬನ್ನು ಮಾಡಿಕೊಂಡು ತಮ್ಮ ಜೀವನೋಪಾಯವನ್ನು ನಡೆಸಿಕೊಂಡು ಹೋಗುವುದಕ್ಕೆ ಅವಕಾಶ ಮಾಡಿಕೊಡಬೇಕಾದದ್ದು ಸರ್ಕಾರದ ಕರ್ತವ್ಯ. ಇದರಿಂದಾಗಿ ಈಗ ದೇಶದ ಮುಂದಿರುವ ಆಹಾರದ ನಿಯಂತ್ರಣದ ಸಮಸ್ಯೆ ಪರಿಹಾರವಾಗಿ, ದೇಶದಲ್ಲಿ ಈಗ ಜನರು ಕಷ್ಟಕ್ಕೆ ಸಿಕ್ಕಿ ನರಳುವುದನ್ನು ತಪ್ಪಿಸಬೇಕಾಗಿದೆ. ಇವೊತ್ತಿನ ದಿವಸ ರೈತರು ನಮಗೆ ಜಮೀನು ಬೇಕು, ಕಾಡುಗಳಲ್ಲಿರುವ ಮರಗಳನ್ನು ಕಡಿಸಿಯಾದರೂ ಜಮೀನುಗಳನ್ನು ಉಳುವುದಕ್ಕೆ ಮಾಡಿಕೊಡಿ, ಗೋಮಾಳಗಳನ್ನಾದರೂ ಕೊಡಿ ಎಂದು ಒತ್ತಾಯದಿಂದ ಕೇಳುತ್ತಿರುವ ಕಾಲದಲ್ಲಿ ಈ ಸಮಸ್ಯೆಯನ್ನು ಯಾವ ರೀತಿ ಪರಿಹರಿಸಬೇಕೆಂಬುದನ್ನು ಸರ್ಕಾರದವರಾಗಲಿ ಅಥವಾ ಈ ಮಾನ್ಯ ಸಭೆಯ ಸದಸ್ಯರಾಗಲಿ ಅಥವಾ ಪ್ರಜಾ ಪ್ರಭುತ್ವದ ತತ್ವವನ್ನೊಪ್ಪಿಕೊಂಡಿರತಕ್ಕ ಪ್ರತಿಯೊಬ್ಬ ಪ್ರಜೆಯೂ ಕೂಡ ಇಂದು ಯೋಚನೆಮಾಡಬೇಕಾದ ಪ್ರಸಂಗ ಬಂದಿದೆ. ಈ ಸಮಸ್ಯೆಯನ್ನು ಬಿಡಿಸುವ ವಿಧಾನದಲ್ಲಿ ನನಗೆ ಒಂದು ವಾಕ್ಯ ಜ್ಞಾಪಕಕ್ಕೆ ಬರುತ್ತಿದೆ 'Either Mohamed should go to the mountain or the mountain should come to Mohamed' ಎಂದು. The latter is not possible ಆದ್ದರಿಂದ ಯಾವ ರೀತಿ ರೈತರು ಕೇಳತಕ್ಕ ಬೇಡಿಕೆಯನ್ನು ಕಾರ್ಯಗತಮಾಡಬೇಕೆಂಬುದು ಈ ಸಭೆಯ ಪ್ರತಿಯೊಬ್ಬ ಸದಸ್ಯರಮೇಲೂ ಒದ್ದಿರತಕ್ಕ ಜವಾಬ್ದಾರಿ. ಈ ಒಂದು ವಿಚಾರ ನಾವು ಯೋಚನೆ ಮಾಡುವಾಗ 'absentee landlords' ಎಂದು ಯಾರನ್ನು ಕರೆಯುತ್ತಿದ್ದೇವೋ, ಸರ್ಕಾರಿ ಖಾತೆ ಖರ್ದಿಗಳಲ್ಲಿ ಶ್ಯಾನುಭೋಗರ ಲೆಕ್ಕಗಳಲ್ಲಿ ಮಾತ್ರ ಯಾರ ಹೆಸರಿದ್ದು ಕಂದಾಯ ಜಮಾ ಆಗುತ್ತಿರುತ್ತದೆಯೋ, ಅವರುಗಳ ಸುಳಿವೇ ಆ ಜಮೀನುಗಳಲ್ಲಿಲ್ಲದೆ ಅವರು ಎಲ್ಲೋ ಇದ್ದುಕೊಂಡು ರೈತರಿಂದ ಜಮೀನನ್ನು ಆಬಾದು ಮಾಡಿಸಿಕೊಳ್ಳುತ್ತಾ ಸುಖವಾಗಿರುತ್ತಾರೆ. ರೈತರ ಕುಂದುಕೊರತೆಗಳನ್ನು ಅವರು ಗಣನೆಗೆ ತೆಗೆದುಕೊಳ್ಳುವಂತೆ ಕಾಣುವುದಿಲ್ಲ; ಸಿಟಿಗಳಲ್ಲಿ ದೊಡ್ಡ ದೊಡ್ಡ ನೌಕರಿಗಳಲ್ಲಿದ್ದುಕೊಂಡು ತೃಪ್ತಿಪಟ್ಟುಕೊಂಡಿರದೆ ಇತ್ತ ಕಡೆ ಜಮೀನುಗಳೂ ಇರಬೇಕು; ಅತ್ತ ಎಲ್ಲಾ ಆಸ್ತಿ ಪಾಸ್ತಿಗಳೂ ಇರಬೇಕೆಂದಿರುತ್ತಾರೆ. ಇಂಥ ವ್ಯಕ್ತಿಗಳು ಸಂಸ್ಥಾನದ ಹಿತದೃಷ್ಟಿಯಿಂದ, ಹಾಗೂ ರೈತರ ಹಿತದೃಷ್ಟಿಯಿಂದ ತಮ್ಮ ಜಮೀನುಗಳನ್ನು ಅವುಗಳನ್ನು ವ್ಯವಸಾಯ ಮಾಡುತ್ತಿರುವ ರೈತರಿಗೇ ಕೊಡತಕ್ಕದ್ದು ಅತ್ಯಾವಶ್ಯಕ. ಬಹುಶಃ ನಾನು ಇವೊತ್ತು ಈರೀತಿಯಾಗಿ ವಾದಿಸುತ್ತಿರುವುದು ಕೆಲವರಿಗೆ ಆಶ್ಚರ್ಯವಾಗಿ ಕಾಣಬಹುದು. ಆದರೆ ಇಂದಲ್ಲ ನಾಳೆಯಾದರೂ ಈ ಸಮಸ್ಯೆ ತಾನಾಗಿಯೇ ಪರಿಹಾರವಾಗುವ ಕಾಲ ಬರುತ್ತದೆ.

ಈಗಾಗಲೇ ನಮ್ಮ ಭಾರತ ದೇಶದಲ್ಲಿ ಅನೇಕ ಭಾಗಗಳಲ್ಲಿ ಈ ರೀತಿ ಪ್ರಯೋಗಗಳಾಗಿ ತಾವಾಗಿಯೇ ಕಾರ್ಯಗತವಾಗುತ್ತಿವೆ. ಈಗ್ಗೆ ಎರಡು ಮೂರು ದಿನಗಳ ಹಿಂದೆ ಸರ್ಕಾರದವರು ಅರ್ಧಂಬರ್ಧ ಇನಾಂ ಮತ್ತು ಜೋಡಿಗಳನ್ನು ರದ್ದುಮಾಡಬೇಕೆಂಬ ಮಸೂದೆಯನ್ನು ತಂದಿದ್ದಾರೆ. ಹೀಗೆ ಅರ್ಧಂಬರ್ಧವಾಗಿ ತಂದಿರುವ ಬಿಲ್ಲಿಗಿಂತಲೂ ಇದು ಇಡೀ ದೇಶದ ಮತ್ತು ವ್ಯಕ್ತಿಯ ದೃಷ್ಟಿಯಿಂದ ಹೆಚ್ಚು ಪ್ರಾಮುಖ್ಯವಾದುದು. ಏಕೆಂದರೆ ರೈತರಿಗೆ ಪ್ರತಿಯೊಬ್ಬರೂ ಸಹಾಯ ಮಾಡಬೇಕು, ಅವರ ಕಷ್ಟಗಳ ನಿವಾರಣೆಯಾಗಬೇಕು, ಅವರ ಹಿತವನ್ನು ರಕ್ಷಣೆ ಮಾಡಬೇಕು ಎಂದು ಘೋಷಿಸುತ್ತೇವೆ. ಯಾವ ರೀತಿ ನಾವು ಅವರಿಗೆ ಸಹಾಯ ಮಾಡುತ್ತಿದ್ದೇವೆ, ನಿಜವಾಗಿ ಸಹಾಯ ಮಾಡುತ್ತಿದ್ದೇವೆಯೇ ರೈತರಿಗೆ ಎಂದು ನಮ್ಮ ಆತ್ಮಕ್ಕೆ ಪ್ರಶ್ನೆ ಹಾಕಿಕೊಂಡರೆ, ಅದಕ್ಕೆ ಉತ್ತರ ಬಹುಶಃ 'ಇಲ್ಲ' ಎಂದು ಬರಬಹುದು. ದೇಶದಲ್ಲಿ ರೈತರು ಬಹಳ ಮುಖ್ಯ, ಅವರು ದೇಶದ ಬೆನ್ನುಮೂಳೆ, ನಮ್ಮ ದೇಶದ ರೈತರ ಹಿತವನ್ನು ರಕ್ಷಿಸಬೇಕಾದುದು ನಮ್ಮ ಆದ್ಯ ಕರ್ತವ್ಯ ಎಂದು ಸಾರುತ್ತಿದ್ದೇವೆ. ಹಿಂದೆ ಸಾರಿದ್ದೇವೆ, ಮುಂದೆಯೂ ಸಾರಬಹುದು. ಆದರೆ ಕಾರ್ಯಗತ ಮಾಡಬೇಕಾಗಿರುವ ವಿಚಾರದಲ್ಲಿ ಸುಮ್ಮನೆ ಹೇಳಿಕೆಗಳನ್ನು ಕೊಡುತ್ತಾ ಅಥವಾ ಉಪಮಾನಗಳನ್ನು ಹೇಳುತ್ತಾ ಹೋಗುವುದು ನ್ಯಾಯವೆ ಎಂಬ

ಪ್ರಶ್ನೆಯನ್ನು ನಮ್ಮ ಹೃದಯಕ್ಕೆ ನಾವೇ ಹಾಕಿಕೊಳ್ಳಬೇಕಾಗುತ್ತದೆ. ರೈತರ ಹಿತದೃಷ್ಟಿಯಿಂದ ಈ ನಿರ್ಣಯವನ್ನು ನಾನು ಈ ಮಾನ್ಯ ಸಭೆಯ ಮುಂದೆ ಮಂಡಿಸಿದ್ದೇನೆ. ಯಾವ ಒಂದು ವಿಚಾರವನ್ನು ಹೇಳುತ್ತಿದ್ದೇವೋ ಅದನ್ನು ಕಾರ್ಯಗತ ಮಾಡಲು, ಈ ಹೊತ್ತಿನಿಂದಾದರೂ ಸರ್ಕಾರ ಮತ್ತು ಮಾನ್ಯ ಸದಸ್ಯರು ಮನಸ್ಸು ಮಾಡಲಿ ಎಂಬ ಉದ್ದೇಶದಿಂದ ಈ ಒಂದು ನಿರ್ಣಯವನ್ನು ತಂದಿದ್ದೇನೆ.

ನಮ್ಮ ದೇಶದ ರಾಜ್ಯಾಂಗದಲ್ಲಿಯೂ ಸಹ ಅನೇಕ ಬದಲಾವಣೆಗಳನ್ನು ನಾವು ಒಪ್ಪಿಕೊಂಡಿದ್ದೇವೆ. ದೇಶದಲ್ಲಿ ಬಡವರು, ದೀನರು, ದಲಿತರು ಇದ್ದಾರೆ. ಅವರ ಆರ್ಥಿಕ ಸಾಮಾಜಿಕ ಮಟ್ಟಗಳಲ್ಲಿ ಅನೇಕ ಸುಧಾರಣೆಗಳನ್ನು ಬದಲಾವಣೆಗಳನ್ನು ಮಾಡಬೇಕು ಎಂದು ಅನೇಕ ರೀತಿಯ ಕಾನೂನು ಕಟ್ಟಳೆಗಳನ್ನು ನಾವು ಮಾಡಿಕೊಳ್ಳುತ್ತಿದ್ದೇವೆ. ರೈತರ ಹಿತದೃಷ್ಟಿಯಲ್ಲಿರುವ ತಕ್ಕಂಥದೊಂದೆರಡು ಕಾನೂನುಗಳನ್ನು ನೋಡೋಣ. ಜೆನೆಸಿಸ್ ಆಕ್ಟ್ ಮುಂತಾದ ಕಾನೂನುಗಳಿವೆ; ಆದರೆ ಈ ಕಾನೂನುಗಳು ಎಷ್ಟುಮಟ್ಟಿಗೆ ರೈತರಿಗೆ ಅನುಕೂಲವಾಗಿವೆ, ಅವರ ಹಿತಕ್ಕೆ ಎಷ್ಟುಮಟ್ಟಿಗೆ ಸಹಾಯಕವಾಗಿವೆ ಎಂದು ಯೋಚನೆ ಮಾಡಿದಲ್ಲಿ, ಈ ರೀತಿಯ ಕಾನೂನುಗಳಿಂದ ಸಮಾಜದ ಜೀವನವನ್ನೇ ಉಳಿಸಿಕೊಡುತ್ತಿರುವ ರೈತನಿಗೆ ಅನುಕೂಲವಾಗಿಲ್ಲವೆಂದರೆ ಅತ್ಯುಕ್ತಿಯಾಗುವುದಿಲ್ಲ. ನಮ್ಮದೇಶ ವ್ಯವಸಾಯದ ದೇಶ. ವ್ಯವಸಾಯ ಮಾಡತಕ್ಕವನಿಗೆ ತಾನು ಮಾಡತಕ್ಕ ಕೆಲಸದಲ್ಲಿ ಮಮತೆ, ಆಸಕ್ತಿ ಮತ್ತು ನಂಬಿಕೆ ಹುಟ್ಟಬೇಕು. ಇವನ್ನು ಅವನಲ್ಲಿ ಹುಟ್ಟಿಸಬೇಕಾದರೆ, ದೇಶದಲ್ಲಿ ಯಾರು ಜಮೀನಿಟ್ಟುಕೊಂಡು ಅದನ್ನು ತಾವು ವ್ಯವಸಾಯ ಮಾಡುವುದಕ್ಕೆ ಶಕ್ತಿ ಇಲ್ಲದೆ ಪರರನ್ನು ತಮ್ಮ ಕೆಲಸಕ್ಕೆ ಅವಲಂಬಿಸಿಕೊಂಡಿದ್ದಾರೋ ಅವರೂ ಸಹ ಉದಾರವಾದ ಮನಸ್ಸನ್ನಿಟ್ಟುಕೊಳ್ಳಬೇಕು. ಈಹೊತ್ತಿನ ದಿವಸ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಮನಸ್ಸನ್ನು ಈ ಕಡೆ ತಿರುಗಿಸದ ಹೊರತು ಮುಂದೆ ದೇಶಕ್ಕೆ ಆಶಾದಾಯಕವಾದ ಪರಿಸ್ಥಿತಿಯುಂಟಾಗುವುದಿಲ್ಲ. ಈ ಮಾತನ್ನು ಹೇಳುವುದಕ್ಕೆ ಒಂದು ಕಾರಣವುಂಟು. ಮನುಷ್ಯನಿಗೆ ಎಲ್ಲಿಯವರಿಗೆ ಸ್ವಾರ್ಥ, ಎಂದರೆ ತಾನು ಬದುಕಬೇಕು, ಸುಖವಾಗಿರಬೇಕು, ತಾನು ತನ್ನದು ಎಂಬ ಮಮಕಾರ ಎಲ್ಲಿಯವರೆಗಿರುತ್ತದೆಯೋ ಅಲ್ಲಿಯವರೆಗೆ ಇಂಥ ಕೆಲಸಕಾರ್ಯಗಳಿಗೆ ಸಮಾಜದಲ್ಲಿ ಅಡ್ಡ ಆತಂಕಗಳಿರುತ್ತವೆ. ನಾನಿರ ತಕ್ಕದ್ದು ನನಗೊಬ್ಬನಿಗೆ ಮಾತ್ರವಲ್ಲ, ದೇಶದ ಪ್ರಗತಿಗಾಗಿ, ಮೇಲ್ಮೆಗಾಗಿ ಎಂಬ ಮಾನೋಧರ್ಮ ಪ್ರತಿಯೊಬ್ಬ ವ್ಯಕ್ತಿಗೂ ಎಲ್ಲಿಯವರೆಗೆ ಹುಟ್ಟುವುದಿಲ್ಲವೋ ಅಲ್ಲಿಯವರೆಗೆ ಎಷ್ಟೇ ಸಂಘಗಳನ್ನೂ ಕಾನೂನುಗಳನ್ನೂ ಮಾಡಲಿ, ಎಷ್ಟೇ ಕಮಿಟಿಗಳನ್ನೂ ಕಮಿಷನ್‌ಗಳನ್ನೂ ಮಾಡಲಿ, ಅಷ್ಟು ಪರಿಣಾಮಕಾರಿಯಾಗುವುದಿಲ್ಲ. ಎಷ್ಟೋ ಕ್ಷೇತ್ರಗಳಲ್ಲಿ, ಎಷ್ಟೋ ಕಾರ್ಯಗಳಲ್ಲಿ ಸಾಧಕ ಬಾಧಕಗಳನ್ನು ಕಂಡುಹಿಡಿದುಕೊಂಡು ಪ್ರಯೋಗಗಳನ್ನು ಮಾಡಿದ್ದಾರೆ. ಆದರೂ ಕಾರ್ಯಗಳೆಲ್ಲ ಅರ್ಧಂಬರ್ಧವಾಗುತ್ತಿವೆ.

ಶ್ರೀ ಬಿ. ಹುಚ್ಚೇಗೌಡ.— ಹಾಗಾದರೆ, ಈ ಸುಧಾರಣೆ ಕೂಡ ಬೇಡವೆಂತರೆ ?

ಶ್ರೀ ಬಿ. ಟಿ. ಕೆಂಪರಾಜ್.— ಬೇಡವೆಂದಲ್ಲ. ಸುಧಾರಣೆ. ಸುಧಾರಣೆ, ಎಂದು ಹೇಳುವಾಗ ಈನಿರ್ಣಯದ ತತ್ವ ಏನಿದೆಯೋ ಆ ತತ್ವವನ್ನು ಪ್ರತಿಯೊಬ್ಬರೂ ಒಪ್ಪಿಕೊಳ್ಳಬೇಕು ಮತ್ತು ಇದನ್ನು ಕಾರ್ಯಗತ ಮಾಡಲು ಒಪ್ಪಿಕೊಂಡು ಮನಸ್ಸು ಮಾಡಬೇಕು. Should Mohammed go to the mountain or the mountain should go to Mohammed ? The latter is an impossibility. Therefore, for the absentee landlords, at least now the day has come, the time has ripened, to purify their hearts and see to the interests of the majority of the people in the nation. Unless and until they come to the decision that they have to give place to the tiller of the soil, the time may come when they will be compelled and pressed to give room for the tiller of the soil who has been toiling for the last so many years under the clutches of these absentee landlords, whom, I may go to the extent of calling as feudal lords.

ಆದುದರಿಂದ ಈ ಒಂದು ವಿಷಯವನ್ನು ದೃಷ್ಟಿಯಲ್ಲಿಟ್ಟುಕೊಂಡು, ಈ ನಿರ್ಣಯವನ್ನೊಪ್ಪಿಕೊಂಡು ಸಾಧ್ಯವಾದಷ್ಟು ಬೇಗ ಇದನ್ನು ಕಾರ್ಯಗತ ಮಾಡಲು ಸರ್ಕಾರದವರು ಧೈರ್ಯವಾಗಿ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಈ ವಿಷಯದಲ್ಲಿ ದೇಶದ ಹೆಚ್ಚಿನ ಜನರ ಬೆಂಬಲ ಸರ್ಕಾರಕ್ಕಿದೆ. ಸರ್ಕಾರ ಈ ರೀತಿ ಒಂದು ಕಾನೂನು ಮಾಡಿದಲ್ಲಿ ಇದಕ್ಕೆ ಹೆಚ್ಚಿನ ಬೆಂಬಲ ಮತ್ತು ಪುರಸ್ಕಾರ ದೇಶದ ಮೂಲೆ ಮೂಲೆಗಳಿಂದಲೂ ಸಿಕ್ಕುತ್ತದೆ ಎಂಬುದರಲ್ಲಿ ಯಾವ ಸಂಶಯವೂ ಇಲ್ಲವೆಂದು ಧೈರ್ಯವಾಗಿ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಆದುದರಿಂದ ರೈತನ ಹಿತದೃಷ್ಟಿಯಿಂದ, ದೇಶದಲ್ಲಿರುವ ಆಹಾರದ ಕೊರತೆಯನ್ನು ನಿವಾರಿಸುವ ದೃಷ್ಟಿಯಿಂದ, ರೈತರಿಗೆ ಅಗತ್ಯವಾಗಿ ದೊರಕಬೇಕಾದ ಮಾನ್ಯತೆ ಕೊಡುವ ನೀತಿಯನ್ನನುಸರಿಸಿ ಈ ನಿರ್ಣಯವನ್ನು ಕಾರ್ಯಗತಮಾಡಲು ಮಾನ್ಯಸದಸ್ಯರೂ ಹಾಗೂ ಸರ್ಕಾರದವರೂ ಕೈಕೊಳ್ಳಬಹುದಾದ ಕಾರ್ಯವನ್ನು ಕೈಕೊಂಡು ಬಡವರಿಗೆ ದೊರೆಯಬೇಕಾದ ಪರಿಹಾರವನ್ನು ಕಲ್ಪಿಸಿಕೊಡಬೇಕೆಂದು ಹೇಳಿ, ನನಗೆ ಇಷ್ಟು ಹೇಳಲು ಅವಕಾಶಕೊಟ್ಟದ್ದಕ್ಕಾಗಿ ಅಧ್ಯಕ್ಷರಿಗೆ ವಂದನೆಗಳನ್ನು ಸಲ್ಲಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Mr. SPEAKER.—Resolution moved :

> " That this Assembly is of the opinion that an absentee landlord may be allowed to possess only 25 acres of kushki, 5 acres of tari or bagayet, with a view to make the tiller of the soil the master of it and give security to the tiller."

ಶ್ರೀ ಕೆ. ಪ್ರಭಾಕರ್ (ನೆಲಮಂಗಲ ಅನುಸೂಚಿತ ಜಾತಿಗಳು).—ಮಾನ್ಯ ಅಧ್ಯಕ್ಷರೆ, ಭೂಮಾಲೀಕತ್ವದ ವಿಚಾರದಲ್ಲಿ ಈ ನಿರ್ಣಯವನ್ನು ತಂದಿರತಕ್ಕ ಮಾನ್ಯ ಮಿತ್ರರಾದ ಶ್ರೀ ಕೆಂಪರಾಜ್ ಅವರಿಗೆ ವಂದನೆಗಳನ್ನು ಸಲ್ಲಿಸಬೇಕಾಗಿದೆ. ಕಾರಣವಾದರೂ ಇಷ್ಟೆ. ಈ ಭೂಸಮಸ್ಯೆ ನಮ್ಮದೇಶದಲ್ಲಿ ಬಹಳದಿವಸಗಳಿಂದಲೂ ಸರ್ಕಾರದವರ ಮುಂದಿದೆ. ಇದನ್ನು ಬೇರೆ ಬೇರೆಯಾಗಿ ಚಿಕ್ಕಚಿಕ್ಕದಾಗಿ ಮಾಡಿಕೊಂಡು ಒಂದಲ್ಲ ಒಂದು

(ಶ್ರೀ ಕೆ. ಪ್ರಭಾಕರ)

ರೂಪದಲ್ಲಿ ಪರಿಹಾರಮಾಡಲು ತೊಡಗಬೇಕೆಂಬ ಉತ್ಸಾಹವೂ ಸರ್ಕಾರಕ್ಕಿದೆ. ಯಾವ ಒಂದು ಬದಲಾವಣೆಯನ್ನು ಮಾಡಬೇಕಾದರೂ ಅದರಲ್ಲಿ ಕೆಲವರಿಗೆ vested interest ಇರತ್ತದೆ. ಬಹಳವರ್ಷಗಳಿಂದ ಅನುಭವಿಸಿಕೊಂಡು ಬಂದಿರುವ ಜನರೂ ಅದರಲ್ಲಿ ಒಂದು ಪ್ರೇಮಸಂಸಾರವನ್ನೇ ಮಾಡಿಕೊಂಡಿರುವ ಜನರೂ ಇರುವಾಗ ಬದಲಾವಣೆಮಾಡಬೇಕೆಂದರೆ, ಒಂದು ಸುಧಾರಣೆಮಾಡಬೇಕೆಂದರೆ ಕಷ್ಟವಿದೆ. ಆದರೂ ಸರ್ಕಾರ ಮುಂದೆ ಬಂದು ದೇಶದ ಪರಿಸ್ಥಿತಿ ಹೇಗಿದೆ ನೀವು ಕಣ್ಣುಬಿಟ್ಟುನೋಡಿ. ಇಂಥ ಪರಿಸ್ಥಿತಿಯಲ್ಲಿ ನಮ್ಮ ಮನೋಧರ್ಮವನ್ನು ಬದಲಾಯಿಸಿದ್ದೇವೆ, ಕಾನೂನು ಮಾಡಿ ನಿಮ್ಮಲಾಭವನ್ನು ಕೂಡ ನಮಗಾಗಿ ಹಂಚಬೇಕಾಗುವುದು ಎಂದು ಹೇಳಿ ಅವರ ಮನಸ್ಸನ್ನು ಪರಿವರ್ತನೆಮಾಡಲು ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಲು ಮನಸ್ಸುಮಾಡಿದ ಹಾಗಿದೆ. ಆದರೆ ನಮ್ಮ ಮಿತ್ರರು ಹೇಳಿದಹಾಗೆ, ಸರ್ಕಾರ ಮಾಡಲಿ ಬಿಡಲಿ, ಮನಸ್ಸಿದ್ದರಲಿ ಇಲ್ಲದೇ ಇರಲಿ, ಜಮೀನು ಬೇಕೆಂದು ಕೇಳತಕ್ಕ ಕೂಗು ಸಫಲವಾಗಲಿ ಇಲ್ಲದಿರಲಿ, ಇಷ್ಟಂತೂ ನಿಜ. ದೇಶದ ಜನಸಂಖ್ಯೆ ದಿನೇದಿನೇ ಜಾಸ್ತಿಯಾಗುತ್ತಿದೆ. ನಮಗೆ ದೊರೆಯಬೇಕಾದ ಆಹಾರ ಪೂರ್ತಿಯಾಗಿ, ನುಲಭವಾಗಿ ಭೂಮಿಯಿಂದಲೇ ಬರಬೇಕಾಗಿರುವುದರಿಂದ. ಈ ಭೂಮಿಯಿಂದ ಎಷ್ಟು ಲಾಭವನ್ನು ಪಡೆಯಬೇಕೋ ಅಷ್ಟನ್ನೂ ಪಡೆಯುವಂತೆ ಭೂಮಿಯನ್ನು ಉಪಯೋಗಿಸುವ ಕಾಲ ಸನ್ನಿಹಿತವಾಗಿದೆ. ಭೂಮಿಯ ಮಾಲೀಕತ್ವ ಯಾರಕ್ಕೆಯ್ಯಲ್ಲಾದರೂ ಇರಲಿ, ಬೇಸಾಯ ಯಾವರೀತಿಯಾದರೂ ನಡೆಯುತ್ತಾ ಇರಲಿ, ಅದನ್ನು ಒಂದಲ್ಲ ಒಂದು ರೀತಿಯಲ್ಲಿ ಉತ್ತಮಪಡಿಸಿ ಲಾಭವನ್ನು ಹೆಚ್ಚು ಹೆಚ್ಚಾಗಿ ಪಡೆಯುವುದಕ್ಕೆ ರೈತರು ತಯಾರಾಗಿರಲಿ ಇಲ್ಲದೇ ಇರಲಿ ಸರ್ಕಾರ ಈ ಬಗ್ಗೆ ಕೈಹಾಕಿ ಒಂದು ವ್ಯವಸ್ಥೆ ಮಾಡಿಕೊಟ್ಟು ಒಂದು ಕಡೆ ಬೆಳೆಯುವವರಿಗೆ ಸೌಕರ್ಯವನ್ನು ಮಾಡಿಕೊಟ್ಟು ಮತ್ತೊಂದುಕಡೆ ದೇಶದಹಿತಕ್ಕೆ ಮಾರ್ಗದರ್ಶಕವಾಗುವುದಕ್ಕೂ ಕಾಲಬಂದಿದೆ ಈ ನಿರ್ಣಯವು ಸಕಾಲದಲ್ಲಿ ಬಂದಿದೆ ಎಂದು ಹೇಳಬಹುದು. ದೇಶದಲ್ಲಿರುವ ಆಸ್ತಿ ಎಲ್ಲರ ಹಿತಕ್ಕೂ ಇರಬೇಕೆಂದು ಎಲ್ಲಾ ಸರ್ಕಾರಗಳೂ ರಾಷ್ಟ್ರಗಳೂ ಒಪ್ಪಿಕೊಂಡಿವೆ. ಹೀಗಿರುವಾಗ ಒಂದಲ್ಲ ಒಂದು ರೀತಿಯಲ್ಲಿ ನೋಡಿದರೆ, ಭೂಮಿ ಅಥವಾ ಕೆರೆ, ಅಥವಾ ಇನ್ನಾವ ಆಸ್ತಿ, ವಾಸದಮನೆಗಳು ಇವುಗಳೂ ಕೂಡ ಒಬ್ಬವ್ಯಕ್ತಿಯ, ಒಂದು ಸಂಸಾರದ ಅಥವಾ ಕೇವಲ ಒಂದು ಗುಂಪಿನ ಜನರ ಹಿತಕ್ಕಾಗಿ ಸೌಕರ್ಯಕ್ಕಾಗಿ ಕೆಲವು ದಿವಸ ಅಡ್ಡಿ ಆತಂಕಗಳಿಲ್ಲದೆ ನಡೆದುಕೊಂಡು ಬಂದಿದ್ದರೂ ಸೌಹಾರ್ದದಿಂದ ಎಲ್ಲರ ಹಿತಕ್ಕಾಗಿ ಅವು ಉಪಯೋಗವಾಗುವ ಕಾಲ ಬಂದಿದೆ ಎಂಬುದನ್ನು ಎಲ್ಲರೂ ಒಪ್ಪುತ್ತಾರೆ. ಈಗ ಒಂದು ಕಡೆ ಉಳ್ಳತಕ್ಕವರು ಹೊಸದಾಗಿ ಜಮೀನನ್ನು ಉಳಬೇಕು, ಇದು ಬಹಳ ಒಳ್ಳೆಯ ಕಾರ್ಯ ಎಂದು ತಿಳಿದುಕೊಂಡು ಜಮೀನು ಕೇಳುವವರ ಸಂಖ್ಯೆ ಜಾಸ್ತಿಯಾಗಿದೆ. ಸರ್ಕಾರದವರು ಕೊಡೋಣವೆಂದರೆ ಮೂರು ಪ್ರಸಂಗಗಳು ಅವರ ಮುಂದಿವೆ. ಜನರು ಕೇಳುವ ಕಡೆ ಜಮೀನಿಲ್ಲ, ಜಮೀನಿರುವ ಕಡೆ ಕೇಳುವ ಜನರಿಲ್ಲ, ಹೀಗಾಗಿದೆ. ಇರುವ ಜಮೀನನ್ನು ವಿಸ್ತಾರ ಮಾಡಿಕೊಡುವುದು ಯಾವ ಮಾನವ ಸರ್ಕಾರಕ್ಕೂ ಸಾಧ್ಯವಿಲ್ಲ. ಜಮೀನು ಸಮವಾಗಿ ಹಂಚಿಕೆಯಾಗಬೇಕೆಂಬುದು ಅನಿವಾರ್ಯ ಮತ್ತು ನಿರ್ವಿವಾದ ವಾದ ವಿಚಾರ. ಸಮಾಜದಲ್ಲಿ ಈಗ absentee landlords ಎಂದಿದ್ದಾರೆ. ಇವರು ಜಮೀನಿನಿಂದ ಬರುವ ಉತ್ಪತ್ತಿಯಿಂದಲೇ ಜೀವನ ಮಾಡುತ್ತಿಲ್ಲ. ಭೂಮಿಯ ಉತ್ಪತ್ತಿಯಿಲ್ಲದೆ ಇನ್ನಾವುದಾದರೂ ಬೇರೆ ಮಾರ್ಗದಿಂದ ವಂಶಪಾರಂಪರ್ಯವಾಗಿ ಬರುತ್ತದೆ, ಬೇರೆ ಕಸಬನ್ನಿಟ್ಟುಕೊಂಡಿರುತ್ತಾರೆ. ಈಗ ಎಷ್ಟೇ ಸ್ವಾತಂತ್ರ್ಯವನ್ನು ಕೊಡಬೇಕೆಂದು ಹೇಳಿದರೂ ಭೂಮಿಯನ್ನುಳ್ಳವರಿಗೂ ಸರ್ಕಾರಕ್ಕೂ ನಡುವೆ ಇರುವ ಮಧ್ಯಸ್ಥಗಾರರನ್ನಿಟ್ಟಿರುವುದು ತಪ್ಪು. ಹಾಗೆಯೇ absentee landlords ಇದ್ದಾರೆ. ಇವರನ್ನು ತೆಗೆಯುವುದು ಧರ್ಮ. ಇದನ್ನು ಸಂಪೂರ್ಣವಾಗಿ ತೊಡೆದುಹಾಕುವಾಗ ಬಹಳ ದಿವಸಗಳಿಂದ ಬಂದಿರುವವರಿಗೆ ಅವರ ಉಪಯೋಗಕ್ಕೆ ಸ್ವಲ್ಪ ಭಾಗದ ಜಮೀನನ್ನು ಬಿಟ್ಟುಕೊಟ್ಟು ಮಿಕ್ಕದ್ದನ್ನು ಹಂಚಿಬಹುದು. 25 ಎಕರೆ ಖುಷ್ಕಿ, 5 ಎಕರೆ ತರಿ ಕಡಮೆ ಎಂದು ಕಾಣಬಹುದು. ಆದರೂ ಈ ನಿರ್ಣಯವನ್ನು ಒಪ್ಪಿಕೊಳ್ಳಲೇ ಬೇಕು. ಭೂಸುಧಾರಣೆ ನಮ್ಮ ದೇಶದ ಮುಂದಿದೆ. ಅದನ್ನು ಜಾರಿಗೆತರಲು ನಮ್ಮ ಸರ್ಕಾರಕ್ಕೂ ಆಶೆ ಇದೆ. ಜೋಡಿ ರದ್ದುಮಾಡುವುದು, absentee landlordsಗೇ ಬೇರೆ ಕಾನೂನು ಮಾಡುವುದು, ಹೀಗೆ piecemeal ಭೂಸುಧಾರಣೆಗಳೇನಿವೆಯೋ ಇವೆಲ್ಲವನ್ನೂ ಕ್ರೋಢೀಕರಿಸಿ ಒಂದೇ ಸಾರಿ Land Reforms Act ಎಂದು ಮಾಡಿ ಇದರ ಮೂಲಕ ಭೂಮಿಯ ವಿಚಾರದಲ್ಲಿರತಕ್ಕ ಸಮಸ್ಯೆಗಳೆಲ್ಲವನ್ನೂ ಬಹುಮಟ್ಟಿಗೆ ಚೆನ್ನಾಗಿ ಬಗೆಹರಿಸುವ ರೀತಿಯನ್ನು ಸರ್ಕಾರದವರು ಮಾಡಿದರೆ ಬಹಳ ಒಳ್ಳೆಯದೆಂದು ನನ್ನ ಭಾವನೆ. ಅಂತೂ ಈ ನಿರ್ಣಯವನ್ನು ಸಾಂಪ್ರದಾಯಿಕವಾಗಿ ಚರ್ಚೆಮಾಡಿ ವಾಪಸ್ಸು ತೆಗೆದುಕೊಳ್ಳುವ ಮಟ್ಟಕ್ಕೇ ನಿಲ್ಲುವುದಿಲ್ಲವೆಂದು ನಂಬಿದ್ದೇನೆ. ಏಕೆಂದರೆ, ಈಗಾಗಲೇ land scarcity ಸರ್ಕಾರದವರ ಗಮನಕ್ಕೆ ಬರುತ್ತಿದೆ. ಜಮೀನು ಬೇಕೆಂದು ಅರ್ಜಿ ಹಾಕುವವರಿಗೆ ಯಾವ ಧೈರ್ಯದಿಂದ ಸರ್ಕಾರ yes or no ಎಂದು ಹೇಳುವುದು ಸಾಧ್ಯ ಎಂದು ಸರ್ವರೂ ಯೋಚನೆ ಮಾಡಬೇಕಾಗಿದೆ. ಆದುದರಿಂದ absentee landlords ನಿಂದ ಸ್ವಲ್ಪ ಜಮೀನು ತೆಗೆದುಕೊಂಡು ವ್ಯವಸಾಯ ಮಾಡುವ ಜನರಿಗೆ ಕೊಡುವುದು ಅನಿವಾರ್ಯವಾಗಿದೆ. ಆದುದರಿಂದ ಸರ್ಕಾರದವರ ಸ್ಥಿತಿಯೂ ಎಷ್ಟು ಕಷ್ಟವಾಗಿದೆ ಎಂಬುದನ್ನು absentee landlordsಗಳು ಸಹ ನೋಡಬೇಕು. ಜಮೀನನ್ನು ಸುಮ್ಮನೆ ಇಟ್ಟುಕೊಂಡು, ಇದರ ಫಲವನ್ನು ದೇಶಕ್ಕೆ ಕೊಡದೇಯಿರುವ absentee landlords ಅಲ್ಲದೆ ಇತರ ಜಮೀನ್ದಾರರೂ ಕೂಡ ಸರ್ಕಾರದೊಡನೆ ಸಹಕರಿಸಬೇಕು. ಜಮೀನು ನಮ್ಮಲ್ಲಿರುವುದನ್ನೇ ವೃದ್ಧಿಮಾಡಿ ಅದರಿಂದ ಧಾನ್ಯವನ್ನು ತೆಗೆದು ದೇಶಕ್ಕೆ ಕೊಡುತ್ತೇವೆಂದರೆ, ಇದರಿಂದ ಹೆಚ್ಚು ದಾಹ ಅಡಗುವುದಿಲ್ಲ. ಆದರೆ ಉಪಕಾರವಾಗದೇ ಇರುವುದಿಲ್ಲ.

3 P. M.

ಈ ದಿವಸ ಜಮೀನ್‌ಬೇಕೆಂದು ಕೇಳತಕ್ಕವರ ಸಂಖ್ಯೆ 90 ಇದ್ದರೆ ಕೊಡುಗೈಗಳ ಸಂಖ್ಯೆ 10 ಇದೆ. ಆದುದರಿಂದ ಇದನ್ನು ಒಂದು ಸಮತೂಕಕ್ಕೆ ತರುವುದು ಬಹಳ ಕಷ್ಟವಾಗುತ್ತದೆ. ಆದರೆ ಸರ್ಕಾರದವರು ಇಂಥ ವಿಚಾರಗಳಿಗಾಗಿ ಒಂದು ಕಾನೂನನ್ನು ತಂದರೆ, ಅವರು ಸಮ್ಮನೆ ಒಂದು ಒತ್ತಾಯದೃಷ್ಟಿಯಿಂದ, ಜನರನ್ನು ಒತ್ತಾಯಪಡಿಸಬೇಕೆಂದು ತರುವುದಿಲ್ಲ. ಆದರೆ ಈ ದೊಡ್ಡ ದೊಡ್ಡ ಜಮೀನ್ದಾರರು ಈ landless

class ಗಳವರಿಗೆ ತೋರಿಸುತ್ತಿರುವ ಒಂದು ಧೋರಣೆಯಿಂದ ಸರ್ಕಾರದವರು ಈ ದಿವಸ ಅಂಥ ಒಂದು ಮಸೂದೆಯನ್ನು ಜಾರಿಗೆತರಬೇಕೆಂದು ನಾನು ತಿಳಿಸುತ್ತಿದ್ದೇನೆ. ಈ ದಿವಸ ಸರ್ಕಾರದವರು ಅಂಥ ಒಂದು ಮಸೂದೆಯನ್ನು ತರಬೇಕೆಂದು ಹೇಳತಕ್ಕದ್ದು ಬಡವರ ಹಿತದೃಷ್ಟಿಯಿಂದ ನ್ಯಾಯವಾಗಿದೆ ಎಂಬ ಅಂಶ ಚೆನ್ನಾಗಿ ಜನರ ಮನಸ್ಸಿನ ಮೇಲೆ ಪರಿಣಾಮವಾಗುವಂತೆ ಆಗಬೇಕು ಆಗಲೇ ಈ ಜಮೀನುಗಳನ್ನು ಎಲ್ಲರಿಗೂ ಹಂಚಿಕೆ ಮಾಡಲು ಒಂದು ಅವಕಾಶವಾಗುವುದು. ಆದುದರಿಂದ ಸರ್ಕಾರದವರು ಕೂಲಂಕಷವಾಗಿ ಈ ಎಲ್ಲ ವಿಷಯಗಳನ್ನೂ ಪರ್ಯಾಲೋಚನೆ ಮಾಡಬೇಕೆಂದೂ ಹಾಗೆ ಬೇಗ ಪರ್ಯಾಲೋಚನೆ ಮಾಡಿ, ಜಾಗ್ರತೆ ಒಂದು ತೀರ್ಮಾನಕ್ಕೆ ಬರಬೇಕೆಂದೂ, ಅನಂತರ ಇದನ್ನು ಬೇಗ ಕಾರ್ಯ ರೂಪಕ್ಕೆ ತಂದು, ಒಂದು ಲ್ಯಾಂಡ್ ರೆಕಾರ್ಡ್ಸ್ ಆಕ್ಟ್ ಎಂದು ಮಾಡಿ, ಪುನಃ ನಾವು ಇನ್ನು 30-40 ವರ್ಷಗಳ ತನಕ ಇದರ ಪ್ರಶ್ನೆ ಪದೇ ಪದೇ ಏಳದಂತೆ ಮಾಡಬೇಕೆಂದು ತಿಳಿಸಿ, ಈ ನಿರ್ಣಯವನ್ನು ತಂದಿರತಕ್ಕ ಮಾನ್ಯ ಸದಸ್ಯರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. SPEAKER.—The House will now rise for Lunch and meet again at 3-30 P.M.

The House adjourned at Three Minutes past Three of the Clock and re-assembled at Thirty Minutes past Three of the Clock.

[Mr. SPEAKER in the Chair.]

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ) —ಸ್ವಾಮಿ, ಈ ನಿರ್ಣಯವನ್ನು ತಂದಿರತಕ್ಕವರ ಉದ್ದೇಶವೇನೋ ಒಳ್ಳೆಯದಾಗಿಯೇ ಕಾಣುತ್ತಿದೆ. ಆದರೆ ಇದನ್ನು ಯಾವರೀತಿಯಾಗಿ ಕಾರ್ಯರೂಪಕ್ಕೆ ತರಬೇಕು ಎಂಬ ಅಂಶ ಮಾತ್ರ ನನಗೆ ಕಂಡುಬರುವುದಿಲ್ಲ.

ಸ್ವಾಮಿ, ಮುಖ್ಯವಾಗಿ ನಮ್ಮ ದೇಶದಲ್ಲಿ ಈ ಜಮೀನು ಸುಧಾರಣೆ ಅಷ್ಟು ಕಟ್ಟುನಿಟ್ಟಾಗಿ ಆಗಬೇಕಾಗಿದ್ದರೆ, ಇದಕ್ಕಾಗಿ ಮೊದಲು ಭೂಸುಧಾರಣೆ ಆಗಬೇಕಾದದ್ದು ಬಹಳ ಆವಶ್ಯಕ. ಇದಕ್ಕಿಂತಲೂ ಮುಖ್ಯವಾಗಿ ಮೊದಲು ಆ ಜೋಡಿ ಜಹಗೀರುಗಳು ಬೇಗ ರದ್ದಾಗಬೇಕು. ಅನಂತರ ಈ ಭೂಸುಧಾರಣೆಯನ್ನು ಯಾವರೀತಿ ಮಾಡಿದರೆ ಅನುಕೂಲವಾಗುತ್ತದೆಂಬುದನ್ನು ನೋಡಬೇಕಾಗುತ್ತದೆ. ಈಗ ನಮ್ಮ ದೇಶದಲ್ಲಿರತಕ್ಕ ಹಿಡುವಳಿ ಜಮೀನುಗಳ ವಿಸ್ತೀರ್ಣ ಸುಮಾರು 83 ಲಕ್ಷ ಚಿಲ್ಲರೆ ಎಕರೆಗಳು. ಇದರ ಪೈಕಿ ಸಾಗುವಳಿಯಾಗುತ್ತಿರುವುದು 65 ಲಕ್ಷ ಚಿಲ್ಲರೆ ಮಾತ್ರ. ಇದರಲ್ಲಿ ರೈತರ ಹಿಡುವಳಿಯಲ್ಲಿರತಕ್ಕದ್ದು ಸುಮಾರು 11 ಅಥವಾ 11.5 ಲಕ್ಷ ಎಕರೆಗಳು. ಇನ್ನು ಉಳಿದ ಹಿಡುವಳಿ ಜಮೀನೆಲ್ಲಾ ಆಬ್‌ಸೆಂಟೀ ಲ್ಯಾಂಡ್ ಲಾರ್ಡ್‌ಗಳ ಕೈಸೇರಿರುತ್ತದೆ. ಸರ್ಕಾರದವರು ಈಗ ಆ 2 ಲಕ್ಷ ಎಕರೆಗಳನ್ನು ಕೆಲವರಿಗೆ ಹಂಚಿಬಿಟ್ಟರೆ, ಇನ್ನು ಉಳಿಯತಕ್ಕ ಜನರಿಗೆಲ್ಲಾ ಬರಿಗೈ ಆಗುತ್ತದೆ. ಆದುದರಿಂದ ಇದರಲ್ಲೂ ಅಷ್ಟು ಪ್ರಯೋಜನವಿಲ್ಲ. ಸಾಧಾರಣವಾಗಿ ಜಮೀನುವಾಡತಕ್ಕವನೇ ಜಮೀನಿಗೆ ಒಡೆಯನಾಗಿರಬೇಕೆಂಬ ತತ್ವವನ್ನು ಅವರು ಸ್ಪಷ್ಟವಾಗಿ ಅಂಗೀಕರಿಸುವುದಾದರೆ ಆಗ ನಾವು ಇದಕ್ಕೆ ಒಪ್ಪಿಕೊಂಡರೂ ಒಪ್ಪಿಕೊಳ್ಳಬಹುದು. ಈ ನಿರ್ಣಯದ ಸೂಚಕರು ಆ ಆಬ್‌ಸೆಂಟಿ ಲ್ಯಾಂಡ್‌ಲಾರ್ಡ್‌ಗಳಿಗೂ ಜಮೀನು ಕೊಡಿ ಎಂದು ಹೇಳಿದ್ದಾರೆ—ಅವರು ತಮ್ಮ ನಿರ್ಣಯದಲ್ಲಿ "ಭೂಮಿಯನ್ನು ಬೇಸಾಯ ಮಾಡುವ ರೈತರೇ ಜಮೀನಿನ ಮಾಲೀಕನಾಗಿರತಕ್ಕದ್ದು, ಅವರು ನಿರುಪಾಧಿಕವಾಗಿ ಸಾಗುವಳಿ ಮಾಡಿಕೊಂಡಿರುವಂತೆ ಏರ್ಪಡಿಸುವ ದೃಷ್ಟಿಯಿಂದ ಬೇರೆ ಸ್ಥಳದಲ್ಲಿದ್ದುಕೊಂಡು ಜಮೀನಿನ ಪ್ರತಿಫಲವನ್ನು ಪಡೆಯುವ ಪ್ರತಿಯೊಬ್ಬ ಜಮೀನ್‌ದಾರನೂ 25 ಎಕರೆಗಳಖುಷ್ಕಿ ಜಮೀನನ್ನೂ, 5 ಎಕರೆಗಳ ತರೀ ಜಮೀನನ್ನೂ ಅಥವಾ ಬಾಗಾಯಿತು ಜಮೀನನ್ನು ಮಾತ್ರ ಪಡೆಯಲು ಅವಕಾಶವಿರಬೇಕು" ಎಂದು.....ಕೇಳಿದ್ದಾರೆ. ಹೀಗೆ ಆಬ್‌ಸೆಂಟೀ ಲ್ಯಾಂಡ್‌ಲಾರ್ಡ್‌ಗಳಿಗೂ ಜಮೀನನ್ನು ಕೊಡಬೇಕೆಂದು ಹೇಳಿರುವುದು ಅಷ್ಟು ಸಾರ್ಥಕವಾಗುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಈ ಕಾರಣದಿಂದ ಈ ನಿರ್ಣಯವನ್ನು ನಾನು ಅಂಗೀಕಾರಮಾಡುವುದಕ್ಕಾಗುವುದಿಲ್ಲ. ಆದರೆ ಈಗಾಗಲೇ ತಿಳಿಸಿದಂತೆ, ನಾನು ಇದನ್ನು ತತ್ವತಃ ವಿರೋಧಿಸಬೇಕಾಗಿದೆ. ಇದೂ ಅಲ್ಲದೆ ನಮ್ಮ ದೇಶದಲ್ಲಿರತಕ್ಕ ಜಮೀನಿನ ವಿಸ್ತೀರ್ಣ ಎಲ್ಲ ಕುಟುಂಬಗಳಿಗೂ ಒಂದು ಲಾಭದಾಯಕವಾಗಿರುವಂಥ ರೀತಿಯಲ್ಲಿ ಹಂಚುವುದಕ್ಕೆ ಸಾಧ್ಯವಿಲ್ಲ. ಆದರೆ ಒಂದು ಸಂಸಾರಕ್ಕೆ 25 ಎಕರೆ ಜಮೀನಿರಬೇಕೆಂದು ಹೇಳುವುದರಲ್ಲಿ ತಪ್ಪೇನೂ ಇಲ್ಲ. ಈಗ 25 ಎಕರೆ ಜಮೀನಿಟ್ಟುಕೊಂಡಿರತಕ್ಕವರೆಲ್ಲಾ ಘನಲು ಬೆಳೆಯುತ್ತಿರುವುದು ಕೇವಲ ಒಂದು ಎಕರೆಯಲ್ಲಿ ಮಾತ್ರ. ಆದ್ದರಿಂದ ಮುಖ್ಯವಾಗಿ ಈ ದಿವಸ ಯಾರು ಜಮೀನನ್ನು ಇಟ್ಟುಕೊಂಡು ಅದನ್ನು ಸ್ವತಃ ವ್ಯವಸಾಯ ಮಾಡಿಕೊಂಡು ಹೋಗುತ್ತಿದ್ದಾರೋ ಅಂಥವರಿಗೆ ಜಮೀನನ್ನು ಕೊಡುವುದು ಒಳ್ಳೆಯದು. ಇಂಥವರಿಗೆ ಭೂಮಿಯನ್ನು ಕೊಟ್ಟರೆ ಅದರ ಪ್ರತಿಫಲ ರಾಷ್ಟ್ರಕ್ಕೆ ಒದಗೀತು. ಅವನಿಗೂ ಒಂದು ಅನುಕೂಲವಿರುತ್ತದೆ. ಆದುದರಿಂದ ನಾವು ಈ ದಿವಸ ಈ ಗೈರ್ ಹಾಜರಿ ಜಮೀನ್ದಾರರಿಗೆ ಜಮೀನನ್ನು ಕೊಡಬೇಕೆ, ಬೇಡವೆ ಎಂಬ ಪ್ರಶ್ನೆಗೆ ನೈಹಾಕುವುದೇ ಅಷ್ಟು ಸಾಧುವಾದದ್ದಲ್ಲವೆಂದು ನಾನು ತಿಳಿಸಬೇಕಾಗಿದೆ. ನಾವು ಈಗಾಗಲೇ ಯಾವ ಒಂದು ತತ್ವವನ್ನು ಅಂಗೀಕರಿಸಿದ್ದೇವೋ ಆ ತತ್ವದ ಪ್ರಕಾರ ಈ ಜಮೀನುಗಳು ಇದ್ದರೆ ಸಾಗುವಳಿದಾರನ ಕೈಲಿ ರಬೇಕು ಇಲ್ಲವೇ ಕೋ-ಆಪರೇಟಿವ್ ಬೇಸಿಸ್‌ಮೇಲೆ ಸಾಗುವಳಿ ಮಾಡತಕ್ಕ ಸಂಸ್ಥೆಯವರ ಕೈಲಿರಬೇಕೇ ಶಿವಾಯಿ ಹೀಗೆ ಈ ಸಣ್ಣ ಸಣ್ಣ ಹಿಡುವಳಿದಾರರುಗಳಿಂದ ಜಮೀನು ಸಾಗುವಳಿಮಾಡಲು ಸಾಧ್ಯವಾಗುವುದಿಲ್ಲ. ಸಾಗುವಳಿಗೆ ಅನುಕೂಲವಾಗುವಂತೆ ಮಾಡಬೇಕಾಗಿದ್ದರೆ ಹೆಚ್ಚು ಹೆಚ್ಚು ಜಮೀನುಗಳಿದ್ದರೇ ಅನುಕೂಲ. ಈ ಭೂಮಿಯ ಹಿಡುವಳಿಯನ್ನು ಸಣ್ಣಸಣ್ಣಗೆ ಛಿದ್ರ ಛಿದ್ರವಾಗಿ ಮಾಡತಕ್ಕದ್ದೂ ಕೂಡ ಸರಿಯಾದುದಲ್ಲ. ಈ ಎಲ್ಲ ಕಾರಣಗಳಿಂದ ಆಬ್‌ಸೆಂಟಿ ಲ್ಯಾಂಡ್‌ಲಾರ್ಡ್‌ಗಳಿಗೆ ಜಮೀನು ಕೊಡಬೇಕೆಂದು ಹೇಳಿರತಕ್ಕದ್ದನ್ನು ನಾನು ಒಪ್ಪಲು ಸಾಧ್ಯವಿಲ್ಲ. ಆದುದರಿಂದ ನಾನು ಈ ನಿರ್ಣಯವನ್ನು ವಿರೋಧಿಸುತ್ತೇನೆ.

ಶ್ರೀ ಎಂ. ಮಾದಯ್ಯ (ನಂಜನಗೂಡು ಅನುಸೂಚಿತ ಜಾತಿಗಳು).—ಈಗ ಫ್ಯಾಮಿಲಿ ಹೋಲ್ಡಿಂಗಿಗೆ ಎಷ್ಟು ಜಮೀನಿರಬೇಕೆಂದು ವಿಧಾಯಕ ಮಾಡುತ್ತಾರೋ ಅದಕ್ಕಿಂತಲೂ ಜಾಸ್ತಿಯಾಗಿ ಈ land-less class ಇರುತ್ತದೆ. ಈ ಗುರಿಯನ್ನು ಮನಸ್ಸಿನಲ್ಲಿಟ್ಟುಕೊಂಡು ಇದನ್ನು ಸರಿಪಡಿಸುವುದಕ್ಕಾಗಿ ಕೇಂದ್ರ ಸರ್ಕಾರದವರು ಒಂದು ಸೆಂಟ್ರಲ್ ಪ್ಲಾನಿಂಗ್ ಸಮಿತಿ ಎಂಬು

(ಶ್ರೀ ಎಂ. ಮಾದಯ್ಯ)

ದಾಗಿ ಒಂದು ಸಮಿತಿಯನ್ನು ನೇಮಕಮಾಡಿದ್ದಾರೆ. ಆ ಸಮಿತಿಯವರ ಉದ್ದೇಶಗಳನ್ನೇನಾದರೂ ಈ ನಿರ್ಣಯದ ಮಾನ್ಯ ಸೂಚಕರು ತಮ್ಮ ಮನಸ್ಸಿನಲ್ಲಿಟ್ಟುಕೊಂಡು, ಇದಕ್ಕಾಗಿ ಒಂದು ಸೀಲಿಂಗ್ ಇರಬೇಕೆಂದು ಹೇಳತಕ್ಕದ್ದರ ಬಗ್ಗೆ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೋ ಏನೋ ನನಗೆ ಅದು ತಿಳಿಯದು. ಹಾಗೆ ಈ ಒಂದು ಸೀಲಿಂಗನ್ನು fix-up ಮಾಡಬೇಕೆಂದು ಹೇಳಿರತಕ್ಕದ್ದರ ಉದ್ದೇಶ ಅದೇ ಆಗಿದ್ದರೆ ಈಗ ಈ ನಿರ್ಣಯದಲ್ಲಿ ಹೇಳಿರತಕ್ಕಂಥ ರೀತಿಯಲ್ಲಿ ಅಬ್‌ಸೆಂಟಿ ಲ್ಯಾಂಡ್‌ಲಾರ್ಡುಗಳಿಗೆ ಬಿಟ್ಟುಕೊಡತಕ್ಕ ಜಮೀನು ಲ್ಯಾಂಡ್-ಲೆಸ್ ಜಮೀನುದಾರರಿಗೆ ಜಮೀನನ್ನು ಹಂಚಿಕೆಮಾಡಿದನಂತರ ಉಳಿಯತಕ್ಕ ಜಮೀನಿನಲ್ಲಿ ಅವರಿಗೆ ಕೊಡತಕ್ಕದ್ದು ಇಷ್ಟಿರಬೇಕೆಂದು ಅವರು ತಿಳಿಸಿರುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಆದರೆ ಅವರು ಹೇಳಿರತಕ್ಕ ಆಧಾರಗಳಮೇಲೆ ಇಷ್ಟು ಜಮೀನು ಅವರೆಲ್ಲರಿಗೂ ಸಾಕಾಗುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಆದರೆ ಅವರ ಮನಸ್ಸಿಗೆ ಬೇಸರಪಡಿಸದೆ. ಅವರು ತಂದಿರತಕ್ಕ ಉದ್ದೇಶಕ್ಕೆ ನಾನೂ ಸಹ ನನ್ನ ಸಹಾನುಭೂತಿಯನ್ನು ವ್ಯಕ್ತಪಡಿಸುತ್ತೇನೆ. ಆದರೆ ಈ ಫ್ಯಾಮಿಲಿ ಹೋಲ್ಡಿಂಗ್ ಎಂಬುದನ್ನು ತಾವಿನ್ನೂ ಎಷ್ಟು ವರ್ಷಗಳಲ್ಲಿ ಜಾರಿಗೆ ತರುತ್ತೀರಿ ? ಅಥವಾ ಇದನ್ನು ಜಾರಿಗೆ ತರಲು ತಮಗೆ ಇನ್ನೂ ಎಷ್ಟು ವರ್ಷಗಳ ಕಾಲ ಬೇಕಾಗುತ್ತದೆ ಎಂಬುದನ್ನು ತಿಳಿದುಕೊಳ್ಳಲು ನಾನೀಗ ನಿಂತಿದ್ದೇನೆ.

Mr. SPEAKER.—The Hon'ble Member may hear the Hon'ble Minister.

Sri KADIDAL MANPAPPA (Minister for Revenue and Public Works).—Sir, it is very interesting to study the acquisitive instinct of mankind. The struggle between 'haves' and 'have-nots' is not new to the present age. It is there from the commencement of the human history. Man naturally feels dissatisfied if he does not possess sufficient means of livelihood. But the dissatisfaction is more if he sees others round him rolling in wealth. Therefore it is necessary that we should find out some solution for distributing not only land but all forms of wealth. I do not understand why special emphasis is laid on the question of distributing only agricultural lands; we should be equally keen in the matter of distribution of other forms of wealth like houses, money and .....

Sri S. GOPALA GOWDA (Sagar—Hosanagar).—Power.

Mr. SPEAKER.—By 'power' you mean electricity? (Laughter.)

Sri KADIDAL MANJAPPA.—The Indian National Congress has accepted the principle that generally the tiller of the soil must be the owner. It has also accepted the principle that as far as possible all intermediaries should be liquidated.

On principle there may not be difference between the mover of the resolution and myself. The resolution as it is worded cannot be implemented. In Mysore, the number of small holdings is very large. The figures are already placed before this House by some members on other occasions. The area of the holdings not exceeding one acre is 2,35,075 acres. The area of the holdings not exceeding 5 acres is 17,10,283 acres. Holdings not exceeding 10 acres: 18,11,414 acres. Holdings not exceeding 50 acres: 30,58,773 acres. Holdings not exceeding 100 acres: 8,17,664. Holdings not exceeding 500 acres (that is, between 100 and 500 acres): 3,81,251 acres. Those holdings which exceed 500 acres in extent come to nearly 84,000 acres. In the case of holdings the total extent of which does not exceed 100 acres, there may not be any necessity to fix the ceiling limit. In Mysore State most of the lands are owned by not individuals but by joint families. So, the ceiling limit that we may perhaps fix must necessarily depend upon the number of persons comprising the joint Hindu family. The ceiling limit cannot be uniform in all places. It must naturally vary from place to place and from land to land. The limit that we may fix in the case of coffee plantations or tea plantations may not be applicable to paddy fields or dry lands. The limits we may fix in the case of arecanut garden cannot be made applicable to other kinds of land. The limit we may fix in the case of Channagiri Taluk may not be made applicable to Malnad Taluks.

Sri L. SIDDAPPA.—Why Channagiri Taluk?

Sri KADIDAL MANJAPPA.—The ceiling limit may not be made applicable to Thirthahalli Taluk,

Whatever the ceiling limit we may fix, it must vary from place to place and from locality to locality. Therefore, I submit it is a very difficult and complicated subject. Still the Government are actively considering the question. We may fix the maximum limit in the case of lands in which food crops are grown. We may fix the maximum limit. For instance, it may not be necessary for any individual of a joint Hindu family to own more than 150 acres. There are persons in our State who own more than 500 acres, and their number is about 104, and the persons who own lands exceeding 100 acres in extent and not exceeding 500 acres are about 3,605. So if we try to fix a ceiling limit, about 4,000 persons will be affected and it is better the ceiling limit is fixed in the case of these persons. My friend Sri Srinivasa Iyengar is smiling. I do not know how many acres he is owning; how it affects him I do not know. But anyway, the Government is considering the question of fixing a ceiling limit in the case of these 4,000 and odd holders.

Sri B. HUTCHE GOWDA.—If he is a coffee planter or tea planter?

Sri A. BHEEMAPPA NAIK.—The resolution is about absentee landlords.

Sri KADIDAL MANJAPPA.—We cannot expect 4,000 persons whom I have referred to now to cultivate personally. Most of them are absentee landlords and only absentee landlords will be affected. We may try the experiment in the case of food growing lands in the first instance.

Sri J. MOHAMED IMAM.—Cotton and groundnut growing lands also.

Sri KADIDAL MANJAPPA.—And at the same time we must not forget the question of fragmentation. We must tackle on the one side the question of consolidation and also limiting the holdings. As I have already submitted, it is a very complicated and difficult problem. It requires some time; it cannot be solved overnight. (A Voice: How much time is necessary?) We are actively considering that; we are considering the feasibility of fixing such a ceiling limit. Therefore, in view of what I have said, the Hon'ble mover of the resolution may kindly withdraw his resolution.

Mr. SPEAKER.—What does the member say?

Sri B. T. KEMPA RAJ.—I seek the permission of the House to withdraw the resolution.

The resolution was, by leave withdrawn.

Mr. SPEAKER.—The next resolution stands in the name of Sri H. C. Linga Reddy. He is not present. Resolution No. 21 by Sri Shivananje Gowda. He is not present. Resolution No. 22, Sri B. V. Narayana Reddy.

No. 22.—Incorporation of Telugu-Speaking Areas of the State in the Visala Andhra.

*ಶ್ರೀ ಬಿ. ವಿ. ನಾರಾಯಣರೆಡ್ಡಿ (ಬಾಗೇಪಲ್ಲಿ–ಗುಡಿಬಂಡೆ).—ಅಧ್ಯಕ್ಷರೇ, ನನ್ನ ನಿರ್ಣಯ ಈ ರೀತಿಯಿದೆ:–

"This Assembly is of the opinion that the Telugu-speaking areas of the Mysore State which are contiguous to the Andhra area be incorporated in the Visala Andhra."

ಅದನ್ನು ಮಂಡಿಸುತ್ತೇನೆ.

ಅಧ್ಯಕ್ಷರೇ, ಪ್ರಾಂತಗಳನ್ನು ಆಡಳಿತಾನುಕೂಲ ದೃಷ್ಟಿಯಿಂದ ಮತ್ತು ಭಾಗೋಳಿಕ ದೃಷ್ಟಿಯಿಂದ ಪುನರ್ವಿಭಜನೆ ಮಾಡಿದ್ದರೆ ಎಲ್ಲರಿಗೂ ಅನುಕೂಲ ವಾಗುತ್ತಿತ್ತು. ಅದನ್ನು ಬಿಟ್ಟು ಅದೃಷ್ಟವಶಾತ್ ಅಥವಾ ದುರದೃಷ್ಟವಶಾತ್ ಪ್ರತಿಯೊಬ್ಬರೂ ಭಾಷಾನುಗುಣವಾಗಿ ವಿಭಜನೆಬೇಕೆಂದು ಕೇಳುವುದಕ್ಕೆ ಪುರುಮಾಡಿದ್ದಾರೆ. ಇದೇ ಅಖಿಲ ಭಾರತದಲ್ಲಿ ಎಲ್ಲಾ ಪಾರ್ಟಿಗಳವರೂ–ಕಾಂಗ್ರೆಸ್ ಪಾರ್ಟಿ, ಪಿ. ಎಸ್. ಪಿ. ಪಾರ್ಟಿ, ಸ್ವತಂತ್ರ ಪಾರ್ಟಿ, ಕಮ್ಯೂನಿಸ್ಟ್ ಪಾರ್ಟಿ–ಇವರುಗಳೆಲ್ಲರೂ ಇದೇ ಹಾಡನ್ನೇ ಹಾಡುತ್ತಿದ್ದಾರೆ. ಅದರಂತೆ ಈಗ ಇಂಡಿಯಾ ಸರ್ಕಾರದವರು ಮಾಡ ಹೊರಟಿದ್ದಾರೆ.

The points for consideration are:

(1) That there is a 'War' cry of linguistic States all over India.